# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎಸ್.ಆರ್.ಮಿಟ್ಟಲಕೋಡ, ಅಂದಿನ ಕಿರಿಯ ಇಂಜಿನಿಯರ್, ತಾಲ್ಲೂಕು ಪಂಚಾಯತ್, ಮುಧೋಳ ಇವರ ವಿರುದ್ಧ ಶಿಸ್ತು ಕ್ರಮ – ದಂಡನೆ ವಿಧಿಸುವ ಬಗ್ಗೆ – ಆದೇಶ.

ಓದಲಾಗಿದೆ:-

1) ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 2 ಇಎನ್‌ಕ್ಯೂ 2009 ದಿನಾಂಕ 25.04.2009

2) ಅಪರ ನಿಬಂಧಕರು ವಿಚಾರಣೆಗಳು-4, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರ ಇಲಾಖಾ ವಿಚಾರಣೆ ವರದಿ ಸಂಖ್ಯೆ LOK/ARE-4/ ENQ-20/2009 ದಿನಾಂಕ 27.12.2016.

3) ಮಾನ್ಯ ಉಪ ಲೋಕಾಯುಕ್ತರವರ ಶಿಫಾರಸ್ಸು ವರದಿ ಸಂಖ್ಯೆ LOK/ARE-4/ENQ-20/2009 ದಿನಾಂಕ 29.12.2016.

4) ಸರ್ಕಾರದ 2ನೇ ಕಾರಣ ಕೇಳುವ ನೋಟೀಸ್ ಸಂಖ್ಯೆ ಗ್ರಾಅಪ 5 ಇಎನ್‌ಕ್ಯೂ 2017 ದಿನಾಂಕ 16.01.2017

5) ಶ್ರೀ ಎಸ್.ಆರ್.ಮಿಟ್ಟಲಕೋಡ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ 01.03.2017.

*****

**ಪ್ರಸ್ತಾವನೆ:**

ಮೇಲೆ ಕ್ರಮಸಂಖ್ಯೆ: (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಬಾಗಲಕೋಟೆ ಜಿಲ್ಲೆ, ಮುಧೋಳ ತಾಲ್ಲೂಕಿನ ನಾಗರಾಳ ಗ್ರಾಮ ಪಂಚಾಯತಿ ವತಿಯಿಂದ ಕಟ್ಟಿಸಿದ ನೀರಿನ ತೊಟ್ಟಿ ಕಾಮಗಾರಿಯು ದಿನಾಂಕ 19.04.2004 ರಂದು ಬಿದ್ದು ಹೋದ ಕಾರಣದಿಂದಾಗಿ ಇಬ್ಬರು ಮಹಿಳೆಯರು ಮರಣ ಹೊಂದಿದ್ದು ಮತ್ತು ಒಬ್ಬರು ಗಾಯಗೊಂಡಿದ್ದರಿಂದ ಸದರಿ ಕಾಮಗಾರಿಯನ್ನು ಕಳಪೆಯಾಗಿ ನಿರ್ವಹಿಸಿದ್ದಾರೆಂಬ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಚೇರಿಯು ತನಿಖೆ ನಡೆಸಿ ಲೋಕಾಯುಕ್ತ ಕಾಯ್ದೆ ಕಲಂ 12(3)ರ ಅನುಸಾರ ಸರ್ಕಾರಕ್ಕೆ ಸಲ್ಲಿಸಿದ್ದ ವರದಿಯಲ್ಲಿ, ಶ್ರೀ ಎಸ್.ಆರ್. ಮಿಟ್ಟಲಕೋಡ, ಅಂದಿನ ಕಿರಿಯ ಇಂಜಿನಿಯರ್, ತಾಲ್ಲೂಕು ಪಂಚಾಯತ್, ಮುಧೋಳ ಮತ್ತು ಶ್ರೀ ಎಂ.ಎಂ.ಕಲ್ಯಾಣಶೆಟ್ಟಿ, ಅಂದಿನ ಕಾರ್ಯದರ್ಶಿ, ಗ್ರಾಮ ಪಂಚಾಯತಿ, ಇವರುಗಳ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ನಿಜವೆಂದು ಕಂಡು ಬಂದ ಹಿನ್ನೆಲೆಯಲ್ಲಿ, ಸದರಿಯವರುಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರಂತೆ ನಡೆಸಲು ಸದರಿ ನಿಯಮಗಳ ನಿಯಮ 14(ಎ) ರನ್ವಯ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತ ರವರಿಗೆ ವಹಿಸಲಾಗಿತ್ತು.

ಸದರಿ ಆದೇಶದ ಅನುಸಾರ ಮಾನ್ಯ ಉಪಲೋಕಾಯುಕ್ತರವರು ಅಪರ ನಿಬಂಧಕರು, ವಿಚಾರಣೆಗಳು-4 ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿರುತ್ತಾರೆ. ಅದರಂತೆ ವಿಚಾರಣಾಧಿಕಾರಿಯವರು ಪ್ರಕರಣದಲ್ಲಿ ಭಾಗಿಯಾಗಿರುವ ಇಬ್ಬರು ಆಪಾದಿತರುಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾಗಿ ವಿಚಾರಣೆ ನಡೆಸಿ ವರದಿಯನ್ನು ಮಾನ್ಯ ಉಪಲೋಕಾಯುಕ್ತರವರಿಗೆ ದಿನಾಂಕ 27.12.2016ರಂದು ಸಲ್ಲಿಸಿದ್ದು, ಮಾನ್ಯ ಉಪ ಲೋಕಾಯುಕ್ತರವರು ವಿಚಾರಣಾ ವರದಿಯನ್ನು ಪರಿಶೀಲಿಸಿ, ಇಲಾಖಾ ವಿಚಾರಣೆಯನ್ನು ಸಮರ್ಪಕವಾಗಿ ನಡೆಸಿರುವುದರಿಂದ ವಿಚಾರಣಾ ವರದಿಗೆ ಸಹಮತಿಸಿ ಆರೋಪದ ಗಂಭೀರತೆಗೆ ಅನುಗುಣವಾಗಿ ದಂಡನೆಯನ್ನು ವಿಧಿಸಲು

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ 29.12.2016 ರ ಪತ್ರದಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಪ್ರಕರಣದಲ್ಲಿ ಭಾಗಿಯಾಗಿರುವ ಇಬ್ಬರು ಆಪಾದಿತರುಗಳ ಪೈಕಿ ಶ್ರೀ ಎಂ.ಎಂ.ಕಲ್ಯಾಣಶೆಟ್ಟಿ, ಅಂದಿನ ಕಾರ್ಯದರ್ಶಿ, ಗ್ರಾಮ ಪಂಚಾಯತಿ, ಮಳಲಿ ಮುಧೋಳ ಇವರ ಸಕ್ಷಮ ಪ್ರಾಧಿಕಾರ ನಿರ್ದೇಶಕರು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆಗಿರುವ ಕಾರಣ ದಂಡನೆ ವಿಧಿಸುವ ದಿಸೆಯಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಪ್ರಸ್ತಾವನೆಯನ್ನು ಸದರಿ ಪ್ರಾಧಿಕಾರಕ್ಕೆ ಕಳುಹಿಸಲಾಗಿದೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ವರದಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾಗಿರುವುದರಿಂದ ವಿಚಾರಣಾ ವರದಿಯನ್ನು ಆಧರಿಸಿ ಕ್ರಮ ಕೈಗೊಳ್ಳುವ ಪೂರ್ವದಲ್ಲಿ ಶ್ರೀ ಎಸ್.ಆರ್.ಮಿಟ್ಟಲಕೋಡ, ಕಿರಿಯ ಇಂಜಿನಿಯರ್ ಇವರಿಗೆ ಮಾನ್ಯ ಉಪ ಲೋಕಾಯುಕ್ತರವರ ಶಿಫಾರಸ್ಸು ಹಾಗೂ ವಿಚಾರಣಾ ವರದಿಯ ಪ್ರತಿಯನ್ನು ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ದಿನಾಂಕ 16.01.2017ರಂದು 2ನೇ ಕಾರಣ ಕೇಳುವ ನೋಟೀಸಿನೊಂದಿಗೆ ಜಾರಿ ಮಾಡಲಾಗಿತ್ತು.

ಶ್ರೀ ಎಸ್.ಆರ್.ಮಿಟ್ಟಲಕೋಡ, ಕಿರಿಯ ಇಂಜಿನಿಯರ್ ರವರ ವಿರುದ್ಧ ಸದರಿಯವರು ಮುಧೋಳ ತಾಲ್ಲೂಕು ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ನಾಗರಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಐಯ್ಯನಬಾವಿ ಹತ್ತಿರ ಸಂಪೂರ್ಣ ಗ್ರಾಮೀಣ ರೋಜಗಾರ್ ಯೋಜನೆಯಡಿ ಧೋಬಿ ಘಾಟ್ ಕಟ್ಟಡ ಕಾಮಗಾರಿಯ ಬಗ್ಗೆ ತಾಂತ್ರಿಕ ದೋಷದಿಂದ ಕೂಡಿದ ಅಂದಾಜು ಪಟ್ಟಿಯನ್ನು ತಯಾರು ಮಾಡಿದ್ದು, ಈ ಕಾಮಗಾರಿಯಲ್ಲಿ ನೀರಿನ ತೊಟ್ಟಿಯ ಅಂದಾಜು ಪತ್ರಿಕೆಯಲ್ಲಿ ನೀರಿನ ತೊಟ್ಟಿಗೆ ನೆಲಮಟ್ಟಕ್ಕಿಂತ ಕೆಳಭಾಗದಲ್ಲಿ ತಳಪಾಯ ಹಾಕಲು ಹಾಗೂ ಇಟ್ಟಿಗೆ ಕಟ್ಟಡದಲ್ಲಿ ಮಧ್ಯಂತರ ಕಂಬಗಳನ್ನು ನಿರ್ಮಿಸಲು ಅವಕಾಶ ಕಲ್ಪಸದೇ ತಾಂತ್ರಿಕ ದೋಷದಿಂದ ಕೂಡಿದ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಇದರಿಂದಾಗಿ ಸದರಿ ಕಟ್ಟಡವು ಬಿದ್ದು ಇಬ್ಬರ ಮರಣಕ್ಕೆ ಕಾರಣರಾಗಿ ಕರ್ತವ್ಯಲೋಪವೆಸಗಿರುವ ಬಗ್ಗೆ ಹಾಗೂ ಈ ಕಾಮಗಾರಿಗೆ ಸಾಮಗ್ರಿಗಳನ್ನು ಸಂಗ್ರಹಣೆ ಮಾಡಿ ದುರ್ನಡತೆ ಎಸಗಿರುವ ಬಗ್ಗೆ ಆರೋಪಿಸಲಾಗಿದೆ.

ಸದರಿ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಯವರು ಶಿಸ್ತು ಪ್ರಾಧಿಕಾರದ ಪರವಾಗಿ ಹಾಜರುಪಡಿಸಿದ ಸಾಕ್ಷಿ ಹಾಗೂ ದಾಖಲೆಗಳು ಮತ್ತು ಆಪಾದಿತರ ಪರವಾಗಿ ಹಾಜರುಪಡಿಸಿದ ಸಾಕ್ಷಿ ಹಾಗೂ ದಾಖಲೆಗಳನ್ನು ಪರಿಶೀಲಿಸಿ ದಾಖಲೆ ಮತ್ತು ಸಾಕ್ಷಿಗಳ ಹೇಳಿಕೆಗಳನ್ನು ಪರಿಗಣಿಸಿ ಆಪಾದಿತ ನೌಕರರುಗಳ ವಿರುದ್ಧದ ಆರೋಪಗಳು ಸಾಬೀತಾಗಿವೆ ಎಂದು ಅಭಿಪ್ರಾಯಪಟ್ಟಿರುತ್ತಾರೆ.

ಆಪಾದಿತ ನೌಕರರುಗಳ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಲೋಕಾಯುಕ್ತ ಕಛೇರಿಯು ತನಿಖೆಯನ್ನು ನಡೆಸಿದ್ದು, ನೀರಿನ ತೊಟ್ಟಿಯನ್ನು ನಿರ್ಮಿಸುವ ಬಗ್ಗೆ ಅಂದಾಜು ಪಟ್ಟಿಯನ್ನು ತಯಾರಿಸುವ ಸಂದರ್ಭದಲ್ಲಿ ಸದರಿ ನೀರಿನ ತೊಟ್ಟಿಯಲ್ಲಿ ಎಷ್ಟು ಪ್ರಮಾಣದ ನೀರನ್ನು ಶೇಖರಿಸಲಾಗುತ್ತದೆ, ಸದರಿ ನೀರಿನಪ್ರಮಾಣವನ್ನು ತಡೆಹಿಡಿಯಲು ಎಷ್ಟು ಗಾತ್ರದ ಗೋಡೆಯನ್ನು ನಿರ್ಮಿಸಬೇಕೆಂಬ ತಾಂತ್ರಿಕ ಅಂಶವನ್ನು ಪ್ರಮುಖವಾಗಿ ಪರಿಗಣಿಸಬೇಕಾಗುತ್ತದೆ. ತನಿಖಾಧಿಕಾರಿ ರವರ ಸಾಕ್ಷಿ ಹೇಳಿಕೆಯನುಸಾರ ಭೂಮಿಯನ್ನು ಎರಡೂವರೆ ಅಡಿ ಅಗೆದು ಅದರಲ್ಲಿ ಇಟ್ಟಿಗೆ ಗೋಡೆಗೆ ಆಧಾರವಾಗಿ ಪಿಲ್ಲರ್ ಗಳನ್ನು ನಿರ್ಮಿಸಿದ್ದಲ್ಲಿ ಯಾವುದೇ ನೈಸರ್ಗಿಕ ವಿಕೋಪಗಳಿಗೆ ಈಡಾಗದೇ ದೀರ್ಘಾವಧಿಯವರೆಗೆ ಬಾಳಿಕೆ ಬರುತ್ತದೆಂದು ಆದರೆ ಪ್ರಸ್ತುತ ನೀರಿನ ತೊಟ್ಟಿಗೆ ಆಪಾದಿತ ಅಧಿಕಾರಿಯು ತಯಾರಿಸಿರುವ ಅಂದಾಜಿನಲ್ಲಿ ಇಂತಹ ಯಾವುದೇ ತಾಂತ್ರಿಕ ಅಂಶಗಳನ್ನು ಅಳವಡಿಸದಿರುವುದರಿಂದ ನಿರ್ಮಿಸಲಾದ ನೀರಿನ ತೊಟ್ಟಿಯಲ್ಲಿ ನೀರನ್ನು ಶೇಖರಣೆ ಮಾಡಿದ ಸಂದರ್ಭದಲ್ಲಿ ಒಡೆದುಹೋಗಿದ್ದು, ಇದರಿಂದಾಗಿ ಇಬ್ಬರು ಮರಣ ಹೊಂದುವುದರ ಜೊತೆಗೆ ಒಬ್ಬರು

ಗಾಯಗೊಂಡಿದ್ದು, ಇದಕ್ಕೆ ಪ್ರಮುಖವಾಗಿ ಕಳಪೆ ಅಂದಾಜು ಪಟ್ಟಿಯೇ ಕಾರಣವೆಂಬುದು ಇಲಾಖಾ ವಿಚಾರಣೆಯಲ್ಲಿ ಸ್ಪಷ್ಟವಾಗಿ ಸಾಬೀತಾಗಿರುತ್ತದೆ.

ವಿಚಾರಣಾ ವರದಿ ಹಾಗೂ ಮಾನ್ಯ ಉಪ ಲೋಕಾಯುಕ್ತ ರವರ ಶಿಫಾರಸ್ಸಿಗೆ ಪ್ರತಿಯಾಗಿ ಶ್ರೀ ಎಸ್.ಆರ್.ಮಿಟ್ಟಲಕೋಡ, ಕಿರಿಯ ಇಂಜಿನಿಯರ್, ಇವರು ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದಂತೆ ದಿನಾಂಕ 01.03.2017ರಂದು ಸರ್ಕಾರಕ್ಕೆ ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ತಾವು ಮೂಲತಃ ಲೋಕೋಪಯೋಗಿ ಇಲಾಖೆಯ ಸೇವೆಗೆ ಸೇರಿದ ನೌಕರರಾಗಿದ್ದು ನಿಯೋಜನೆ ಮೇರೆಗೆ ದಿನಾಂಕ 26.06.2001 ರಿಂದ 23.08.2002ರ ಅವಧಿಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಮುಧೋಳ ಇಲ್ಲಿ ಕಾರ್ಯನಿರ್ವಹಿಸಿದ್ದು ಈ ಸಂದರ್ಭದಲ್ಲಿ ಮುಧೋಳ ತಾಲ್ಲೂಕಿನ ನಾಗರಾಳ ಗ್ರಾ.ಪಂ., ವ್ಯಾಪ್ತಿಯಲ್ಲಿ ಬರುವ ಐಯ್ಯನಭಾವಿ ಹತ್ತಿರ ಜಿಲ್ಲಾ ಪಂಚಾಯತಿಯ ನಿರ್ದೇಶನದಂತೆ ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಯಡಿ ರೂ. 50,000/-ಗಳ ಅಂದಾಜು ಮೊತ್ತಕ್ಕೆ ಸೀಮಿತವಾಗಿ ಕಾಮಗಾರಿಯನ್ನು ಕೈಗೊಳ್ಳಬೇಕಾದ ಕಾರಣ ಅಷ್ಟಕ್ಕೆ ಸೀಮಿತವಾಗಿ ದೋಬಿ ಘಾಟ್ ಕಟ್ಟಡ ಕಾಮಗಾರಿಯ ಅಂದಾಜು ಪಟ್ಟಿಯನ್ನು ಮಾತ್ರ ತಯಾರಿಸಿದ್ದು ತದನಂತರ ತಮ್ಮ ಸೇವೆಯನ್ನು ಗ್ರಾಅಪ ಇಲಾಖೆಯಿಂದ ಲೋಕೋಪಯೋಗಿ ಇಲಾಖೆಯು ಹಿಂಪಡೆದ ಕಾರಣ ಸದರಿ ಕಾಮಗಾರಿಯನ್ನು ತಾವು ಕಾರ್ಯನಿರ್ವಹಿಸಿದ ಅವಧಿಯಲ್ಲಿ ಕೈಗೊಂಡಿರುವುದಿಲ್ಲವೆಂದು, ತಾವು ತಯಾರಿಸಿದ ಅಜಿದಾಜು ಪಟ್ಟಿಯ ಅನುಸಾರ ನೀರಿನ ತೊಟ್ಟಿಯನ್ನು ನಿರ್ಮಿಸದೇ ಅಜಿದಾಜು ಪಟ್ಟಿಯಲ್ಲಿನ ಅಳತೆಗಿಂತ ಹೆಚ್ಚಿನ ಅಗಲ ಮತ್ತು ಎತ್ತರದಲ್ಲಿ ನಿರ್ಮಿಸಿದ್ದು, ಈ ಅಂಶವು ಲೋಕಾಯುಕ್ತ ಕಛೇರಿಯ ಮಹಜರ್ ವರದಿಯಲ್ಲಿಯೂ ಸಹ ದೃಢಪಟ್ಟಿರುತ್ತದೆ ಎಂದೂ, ಅಜಿದಾಜು ಪತ್ರಿಕೆ ಮತ್ತು ವಾಸ್ತವವಾಗಿ ನಿರ್ಮಿಸಿದ ನೀರಿನ ತೊಟ್ಟಿಯ ಕಾಮಗಾರಿಯ ಅಳತೆಗಳಲ್ಲಿ ವ್ಯತ್ಯಾಸವಿರುವ ಅಂಶವನ್ನು ಇಲಾಖಾ ವಿಚಾರಣೆ ಸಂದರ್ಭದಲ್ಲಿ ವಿಚಾರಣಧಿಕಾರಿ ರವರ ಗಮನಕ್ಕೆ ತಂದಿದ್ದರೂ ಸಹ ವಿಚಾರಣಾಧಿಕಾರಿ ರವರು ಈ ಅಂಶವನ್ನು ಪರಿಗಣಿಸಿರುವುದಿಲ್ಲವೆಂದು ಹಾಗಾಗಿ ಅಂದಾಜು ಪತ್ರಿಕೆ ದೋಷಪೂರಿತವಾಗಿದೆ ಎಂಬುದನ್ನು ತಾವು ಒಪ್ಪುವುದಿಲ್ಲವೆಂದು, ಇಲಾಖಾ ವಿಚಾರಣೆ ಸಂದರ್ಭದಲ್ಲಿ ತಾವು ಸಲ್ಲಿಸಿದ ಹೇಳಿಕೆ ಅಥವಾ ಇತರೆ ಅಂಶಗಳನ್ನು ವಿಮರ್ಶೆಗೆ ಒಳಪಡಿಸದೇ ಆರೋಪ ಸಾಬೀತಾಗಿದೆ ಎಂದು ಹೇಳಿರುವುದು ನ್ಯಾಯಯುತವಾಗಿರುವುದಿಲ್ಲವೆಂದು, ಮಾನ್ಯ ಉಪ ಲೋಕಾಯುಕ್ತ ರವರಿಗೆ ನಿರ್ದಿಷ್ಟವಾಗಿ ದಂಡನೆ ವಿಧಿಸಲು ಶಿಫಾರಸ್ಸು ಮಾಡುವ ಅಧಿಕಾರ ಇರುವುದಿಲ್ಲವೆಂದು ಇತ್ಯಾದಿ ಅಂಶಗಳನ್ನು ತಿಳಿಸಿ ತಮ್ಮನ್ನು ಆರೋಪಮುಕ್ತರನ್ನಾಗಿಸುವಂತೆ ಕೋರಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ವಿಚಾರಣಾ ವರದಿ, ದೋಷಾರೋಪಗಳು, ಸಾಕ್ಷಿಗಳ ಹೇಳಿಕೆಗಳು ಹಾಗೂ ಆಪಾದಿತರ ಲಿಖಿತ ಹೇಳಿಕೆಯಲ್ಲಿನ ಅಂಶಗಳನ್ನು ಸರ್ಕಾರವು ಪರಿಗಣಿಸಿರುತ್ತದೆ. ಶ್ರೀ ಎಸ್.ಆರ್.ಮಿಟ್ಟಲಕೋಡ, ಅಂದಿನ ಕಿರಿಯ ಇಂಜಿನಿಯರ್ ಇವರು ಸದರಿ ನೀರಿನ ತೊಟ್ಟಿಯ ಅಂದಾಜು ಪತ್ರಿಕೆ ತಯಾರಿಸುವ ಸಂದರ್ಭದಲ್ಲಿ ತಾಂತ್ರಿಕ ಅಂಶಗಳನ್ನು ಪರಿಗಣಿಸಿ ನೀರಿನ ಪ್ರಮಾಣವನ್ನು ತಡೆಯುವಂತಹ ಅಳತೆ ಪ್ರಮಾಣಗಳನ್ನು ಸಮರ್ಪಕವಾಗಿ ಅಳವಡಿಸದೇ ಇರುವುದು, ಇದರಿಂದಾಗಿ ನೀರಿನ ತೊಟ್ಟಿಯ ನಿರ್ಮಾಣದ ನಂತರ ನೀರನ್ನು ಶೇಖರಿಸಿದ ಸಂದರ್ಭದಲ್ಲಿ ಅದರ ಒತ್ತಡವನ್ನು ತಾಳದೇ ನೀರಿನ ತೊಟ್ಟಿಯು ಒಡೆದು ಇಬ್ಬರ ಮರಣಕ್ಕೆ ಕಾರಣರಾಗಿದ್ದು, ಆಪಾದಿತರು ನೀರಿನ ತೊಟ್ಟಿಯ ಅಂದಾಜು ತಯಾರಿಕೆಯ ಸಂದರ್ಭದಲ್ಲಿ ತಾಂತ್ರಿಕ ಅಂಶಗಳನ್ನು ಅಳವಡಿಸದೇ ಅಂದರೆ ಕೇವಲ 0.15ಮೀಟರ್ ಭೂಮಿಯನ್ನು ಅಗೆದು ಸಿಮೆಂಟ್ ಬೆಡ್ ಹಾಕದೇ, ಬುಡದಲ್ಲಿ ಸೈಜ್ ಸ್ಟೋನ್ ಕಟ್ಟಡಕ್ಕೆ ಅವಕಾಶ ಮಾಡದೇ ಬೋಲ್ಡರ್ಸ್ ಸಲಹೆ ನೀಡಿ, ಪಿಲ್ಲರ್‌ಗಳಿಲ್ಲದೇ ಕೇವಲ ಇಟ್ಟಿಗೆ ಗೋಡೆಯ ನಿರ್ಮಾಣಕ್ಕೆ ಅವಕಾಶ ಕಲ್ಪಿಸಿ ತಾಂತ್ರಿಕ ದೋಷಯುಕ್ತ ಅಂದಾಜು ಪಟ್ಟಿಯನ್ನು ತಯಾರಿಸಿ ತೀವ್ರತರವಾದ ದುರ್ನಡತೆ ಎಸಗಿರುವುದು ಸ್ಪಷ್ಟವಾಗಿರುತ್ತದೆ. ಹಾಗಾಗಿ ಆಪಾದಿತ ಅಧಿಕಾರಿಯು ತಮ್ಮ ಲಿಖಿತ ಹೇಳಿಕೆಯಲ್ಲಿ ಸಲ್ಲಿಸಿರುವ ಅಂಶಗಳಲ್ಲಿ ಯಾವುದೇ ಪರಿಗಣನಾರ್ಹವಾದ ಅಂಶಗಳು

ಕಂಡುಬಂದಿರುವುದಿಲ್ಲ. ಆದ್ದರಿಂದ ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ಅವರಿಗೆ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ. ಗ್ರಾಅಪ 5 ಇಎನ್‌ಕ್ಯೂ 2017 , ಬೆಂಗಳೂರು, ದಿನಾಂಕ.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಎಸ್.ಆರ್. ಮಿಟ್ಟಲಕೋಡ, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಮುಧೋಳ (ಪ್ರಸುತ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಾಗಲಕೋಟೆ) ಇವರ ವಿರುದ್ಧದ ಸಾಬೀತಾದ ಆರೋಪದ ಗಂಭೀರತೆಗೆ ಅನುಗುಣವಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 8 (iii) ರ ಅನುಸಾರ ಅವರ ಕಾಲಿಕ ವೇತನ ಶ್ರೇಣಿಯಲ್ಲಿ ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಹೊಂದುವಂತೆ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

15/7/17

**(ಎಸ್.ರಂಗನಗೌಡ),**
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಎಂ.ಎಸ್.ಬಿಲ್ಡಿಂಗ್, ಬೆಂಗಳೂರು.
3. ಅಪರ ನಿಬಂಧಕರು ವಿಚಾರಣೆಗಳು-4, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಾಗಲಕೋಟೆ - (ನೋಂದಾಯಿತ ಅಂಚೆ ಮುಖಾಂತರ).
5. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
7. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಾಗಲಕೋಟೆ-(ನೋಂದಾಯಿತ ಅಂಚೆ ಮುಖಾಂತರ).
8. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಮುಧೋಳ / ಬಾಗಲಕೋಟೆ -(ನೋಂದಾಯಿತ ಅಂಚೆ ಮುಖಾಂತರ).
9. ಶ್ರೀ ಎಸ್.ಆರ್.ಮಿಟ್ಟಲಕೋಡ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬಾಗಲಕೋಟೆ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸೇವೆಗಳು-ಎ & ಸಿ).
11. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
12. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಉಪ ಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕರಿಗೆ.
13. ಮಾಹಿತಿ ಕೇಂದ್ರ : ಹೆಚ್ಚುವರಿ ಪ್ರತಿ:ರಕ್ಷಾ ಕಡತ : ಕಂಪ್ಯೂಟರ್ ಸೆಲ್.